ಶ್ರೀಗುರುರಾಜೋವಿಜಯತೇ || ಹರಿಃ ಓಂ ||

# ಪ್ರಮಾಣ ವಚನ ಸಂಗ್ರಹಃ

## ನವೀನ ಗ್ರಂಥದ ಪರಿಚಯ

’ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ, ಬೆಂಗಳೂರು’, ಈ ಸಂಸ್ಥೆಯು ಕಳೆದ ಸುಮಾರು ೪೦ ವರ್ಷಗಳಿಂದ ದ್ವೈತವೇದಾಂತಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಅವಿರತವಾಗಿ ಪ್ರಕಾಶಗೊಳಿಸುತ್ತಲೇ ಇದೆ. ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಮಾಧ್ಯಮಗಳಲ್ಲಿ ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ಗ್ರಂಥಗಳು ಪ್ರಕಟವಾಗಿವೆ. ಆಸಕ್ತಿಯುಳ್ಳ ಜನಸಾಮಾನ್ಯರಿಗೂ, ವಿದ್ವತ್ ಪ್ರಪಂಚಕ್ಕೂ ಮತ್ತು ಪಾಠಪ್ರವಚನ ನಿರತರಿಗೂ ಈ ಗ್ರಂಥಗಳು ಬಹಳ ಸಹಕಾರಿಯಾಗಿವೆ. ಶಾಸ್ತ್ರಗ್ರಂಥಗಳಂತೂ ಎಂಭತ್ತು ವರ್ಷಗಳ ಹಿಂದೆ ಪ್ರಕಟವಾಗಿದ್ದವು. ಪ್ರಕೃತ ೩೦-೪೦ ವರ್ಷಗಳಿಂದ ಉಂಟಾದ ಗ್ರಂಥಗಳ ಅಭಾವವನ್ನು ಪೂರೈಕೆ ಮಾಡಿದ್ದು ಈ ಸಂಸ್ಥೆಯ ಮಹಾತ್ಸಾಧನೆ.

೧೯೯೦ರಲ್ಲಿ ಈ ಸಂಸ್ಥೆಯು ಒಂದು ವಿಶೇಷ ಪ್ರಕಟನಾ ಯೋಜನೆಯನ್ನು ಕೈಕೊಂಡಿತು. ಈ ವಿಚಾರ ಹೊರಹೊಮ್ಮಿದ್ದು ಆಗ ಈ ಸಂಸ್ಥೆಯು ಅಕ್ಯಾಡೆಮಿಕ್ ಕಮಿಟೀ ಅಧ್ಯಕ್ಷರಾದ ಪ್ರೊ. ಕೆ.ಟಿ.ಪಾಂಡುರಂಗಿ ಯವರಿಂದ ಈ ಕಾರ್ಯದ ರೂಪುರೇಷೆಗಳನ್ನು ಅವರು ಸಂಪೂರ್ಣ ವಿಚಾರ ಮಾಡಿ ಈ ಕಾರ್ಯವನ್ನು ಆಧುನಿಕ ವಿದ್ವಾಂಸರೊಬ್ಬರಿಗೆ ಜನವರಿ ೧೯೯೦ ರಲ್ಲಿ ವಹಿಸಲಾಯಿತು. ಅದೇ "ಪ್ರಮಾಣ ವಚನ ಸಂಗ್ರಹಃ" ಎಂಬ ಬೃಹತ್ ಯೋಜನಾತ್ಮಕ ಕಾರ್ಯ.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಭಾಷ್ಯ, ತಾತ್ಪರ್ಯ, ನಿರ್ಣಯ, ಪ್ರಕರಣ ಇತ್ಯಾದಿ ಗ್ರಂಥಗಳನ್ನು ರಚನೆಮಾಡುವ ಸಂದರ್ಭದಲ್ಲಿ ಕೇವಲ

ತಮ್ಮ ವಾಕ್ಯಗಳನ್ನೇ ಹೇಳದೇ, ಮೂಲಗ್ರಂಥ ಗತವಾಕ್ಯಗಳನ್ನು ಅರ್ಥೈಸಲು ಪ್ರಾಮಾಣಿಕ ಬಹುಸಂಖ್ಯಾ ಗ್ರಂಥಾಂತರಗಳಿಂದ ಸಮಾಖ್ಯಾ ವಾಕ್ಯಗಳನ್ನು ಉದಹರಿಸುವಮೂಲಕವೇ ವ್ಯಾಖ್ಯಾನಿಸಿದ್ದಾರೆಂಬುದು ಚಿರಪರಿಚಿತ ವಿಷಯ. ಇದು ಅವರ ಗ್ರಂಥ ರಚನಾ ವೈಷಿಷ್ಟ್ಯ. ಆಚಾರ್ಯರ ಮೂಲ ೩೭ ಗ್ರಂಥಗಳು 'ಸರ್ವಮೂಲ' ಗ್ರಂಥಗಳೆಂದು ಪ್ರಸಿದ್ಧಿ. ಈ ಗ್ರಂಥಗಳು ಅಧ್ಯಯನ ಮಾಡುವವರಿಗೆ ಕುತೂಹಲ, ಆಶ್ಚರ್ಯಗಳನ್ನುಂಟುಮಾಡುತ್ತವೆ.

ಉದಹರಿಸಿದ ವಾಕ್ಯಗಳಲ್ಲಿ ನಿರ್ದಿಷ್ಟಾಕಾರದ ವಾಕ್ಯಗಳೂ (ಅಂದರೆ ಉದಾಹೃತ ಗ್ರಂಥಗಳನ್ನು ನಾಮಪುರಸ್ಸರವಾಗಿಯೂ) ಮತ್ತು ಅನಿರ್ದಿಷ್ಟಾಕಾರದ ವಾಕಗಳೂ (ಅಂದರೆ ಉದಾಹೃತ ಗ್ರಂಥಗಳ ನಾಮನಿರ್ದೇಶವಿಲ್ಲದೆಯೂ) ಹೇರಳವಾಗಿ ಕಂಡುಬರುತ್ತವೆ. ನಮ್ಮ ಈ ಯೋಜನಾಕಾರ್ಯದೃಷ್ಟಿಯಿಂದ ಈ ಗ್ರಂಥಗಳನ್ನು ನೋಡಿದಾಗ ಕೆಳಗೆ ಕಾಣಿಸಿದ ಹತ್ತೊಂಭತ್ತು (೧೯) ಗ್ರಂಥಗಳಲ್ಲಿ ಉದಾಹೃತವಾಕ್ಯಗಳು ಸ್ಪಷ್ಟವಾಗಿವೆ.

ಗೀತಾಭಾಷ್ಯ, ಗೀತಾತಾತ್ಪರ್ಯ, ಬ್ರಹ್ಮಸೂತ್ರಭಾಷ್ಯ ನ್ಯಾಯವಿವರಣ, ಋಗ್ಭಾಷ್ಯ, ವಿಷ್ಣುತತ್ವನಿರ್ಣಯ, ತತ್ವೋದ್ಯೋತ, ಕರ್ಮನಿರ್ಣಯ, ದಶೋಪನಿಷದ್ಭಾಷ್ಯಗಳು  ಮತ್ತು ಭಾಗವತ ತಾತ್ಪರ್ಯ ನಿರ್ಣಯ.

ಇನ್ನುಳಿದ ಗ್ರಂಥಗಳಲ್ಲಿ ಉದಾಹೃತವಾಕ್ಯಗಳು ಗ್ರಂಥಗತ ಶ್ಲೋಕಗಳಲ್ಲಿ ವಿಲೀನವಾಗಿವೆ. ಸಮರ್ಪಕವಾಗಿ ಪ್ರತ್ಯೇಕಿಸುವುದು ಅಸಾಧ್ಯ.

ಈ ಗ್ರಂಥಗಳಿಂದ ಆಯ್ದ ಸಮಗ್ರ ಪ್ರಮಾಣ ವಚನಗಳನ್ನು ವಿಶಿಷ್ಟ ರೀತಿಯಲ್ಲಿ ಸಂಗ್ರಹಿಸಿ ಇವುಗಳನ್ನು ಓದುಗರಿಗೆ ಉಪಯುಕ್ತರೀತಿಯಲ್ಲಿ ಶಾಸ್ತ್ರಗ್ರಂಥಗಳ ಆಧಾರದ ಮೇಲೆ ಕೆಳಗೆ ಕಾಣಿಸಿದಂತೆ ಹನ್ನೆರಡು ಪ್ರಕಾರ ವರ್ಗೀಕರಣ ಮಾಡಲಾಗಿದೆ.

೧. ಭಗವತ್ ಸ್ವರೂಪ ೨. ಲಕ್ಷ್ಮೀ ೩. ದೇವತೆಗಳು ೪. ಚೇತನರು ೫. ಸಾಧನ ೬. ತತ್ವಗಳು ೭. ಶಾಸ್ತ್ರಪ್ರಶಂಸಾ ೮. ಶೃತಿವಾಕ್ಯಾರ್ಥಗಳು ೯. ಜಡಪದಾರ್ಥಗಳು ೧೦. ಪ್ರಪಂಚ ೧೧. ನಿರುಕ್ತರೀತ್ಯಾ ಅರ್ಥಸಂಗ್ರಹ ೧೨. ಮೋಕ್ಷ

ಪ್ರಥಮ ಶೀರ್ಷಿಕೆಯಾದ ಭಗವತ್ ಸ್ವರೂಪ ನಿರೂಪಣ ವಿಷಯಕ ಪ್ರಥಮ ಸಂಪುಟವು ೧೯೯೭ ಸೆಪ್ಟಂಬರ್ ೧೪ ರಂದು ಪ್ರಕಾಶಗೊಳಿಸಲ್ಪಟ್ಟಿತು. ಶೇಷಭಾಗ 'ಭಗವತ್ ಸ್ವರೂಪ ನಿರೂಪಣ' ಮತ್ತು 'ಲಕ್ಷ್ಮೀ ಸ್ವರೂಪ ನಿರೂಪಣ' ದ್ವಿತೀಯ ಸಂಪುಟದಲ್ಲಿದ್ದು ಈ ಸಂಪುಟವು ೧೯೯೮ರಲ್ಲಿ ಪ್ರಕಟವಾಗುವ ನಿರೀಕ್ಷೆ ಇದೆ.

ಇದೇ ಪ್ರಕಾರ ಉಳಿದ ಶೀರ್ಷಿಕೆಗಳಲ್ಲಿ ಅಂತರ್ಗತವಾದ ಪ್ರಮಾಣೋದಾಹೃತ ವಾಕ್ಯಗಳನ್ನು ಇನ್ನು ಐದು ಅಥವಾ ಆರು ಸಂಪುಟಗಳಲ್ಲಿ ಪ್ರಕಾಶಗೊಳಿಸುವ ಯೋಜನೆಯನ್ನು ಸಂಸ್ಥೆಯು ಹೊಂದಿದೆ. ಇದೊಂದು ಎನ್ಸೈಕ್ಲೋಪೀಡಿಯಾ ಆಫ್ ಶ್ರೀ ಮಾಧವ್ಸ್ ಕೊಟೇಷನ್ಸ್

ಶಾಸ್ತ್ರಗ್ರಂಥಗಳಲ್ಲಿ ಕುತೂಹಲಯುಕ್ತ ಆಸ್ತಿಕಮಹಾಜನಗಳಿಗೂ, ವಿದ್ವತ್ಪ್ರಪಂಚಕ್ಕೂ ಮತ್ತು ಸಂಶೋಧಕ ಪಟುಗಳಿಗೂ ಈ ಗ್ರಂಥವು ಸಾಕಷ್ಟು ವಿಷಯಗಳನ್ನೊಳಗೊಂಡಿದೆ.

ಶ್ರೀಮದಾನಂದತೀರ್ಥರ ಸರ್ವಮೂಲಗ್ರಂಥಗಳಲ್ಲಿ ಉದಾಹೃತ ಸಮಗ್ರ ಪ್ರಮಾಣ ವಚನಗಳ ಸಂಗ್ರಹ ಸಮೀಕ್ಷೆಯನ್ನು ಈ ಗ್ರಂಥ ಸಮೂಹಗಳಲ್ಲಿ ಕಾಣಬಹುದು. ಈ ತರಹದ ಪ್ರಕಟಣೆ ಇದೇ ಮೊದಲಬಾರಿಯಾಗಿದ್ದು ಈ ಸಂಸ್ಥೆಯ ಅಭಿಮಾನದ ಸಂಗತಿಯಾಗಿದೆ. ಸಕಲ ಸಜ್ಜನರೂ ಈ ಗ್ರಂಥಸಮೂಹಗತ ವಿಷಯಗಳನ್ನು ಅನುಮೋದಿಸಿ ಸಂತೋಷ ಹೊಂದುವರೆಂಬ ಭರವಸೆಯನ್ನು ಸಂಸ್ಥೆಯು ಹೊಂದಿದೆ.

ಗ್ರಂಥ ದೊರೆಯುವ ಸ್ಥಳ : ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ, ೩೩/೧೬೯, ೧೦ ಬಿ. ಮೇನ್, ೧ನೇ ಬ್ಲಾಕ್, ಜಯನಗರ, ಬೆಂಗಳೂರು - ೫೬೦೦೧೧.